ಸಚಿವರು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಬೇಕಾಗಿರತಕ್ಕಂಥ ಪೂರಕ ಔಷಧಿಗಳನ್ನು ರೋಗವನ್ನು ತಡೆಗಟ್ಟುವಂತಹ ವಿಚಾರದಲ್ಲಿ ಕ್ರಮ ಕೈಗೊಳ್ಳತಕ್ಕಂಥಾದ್ದು, ಮತ್ತು ಐ ಆರ್ ಡಿ ಪಿ ಸಾಲ ತೆಗೆದು ಕೊಂಡಂತಹವರಿಗೆ ಮಾಫಿ ಮಾಡುವ ವಿಚಾರದಲ್ಲಿ ಅಥವಾ ಇನ್‌ಶೂರೆನ್ಸ್ ಮೂಲಕವಾಗಿ ಹಣ ಕಟ್ಟುವಂಥಾದ್ದೋ ಅಥವಾ ಅದರ ಮೂಲಕವಾಗಿ ಆ ಸಾಲವನ್ನು ಮಧ್ಯಾವಧಿ ಸಾಲವನ್ನಾಗಿ ಪರಿವರ್ತಿಸಬೇಕೋ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆದ್ದರಿಂದ ನಾನು ಸರ್ಕಾರದ ಜೊತೆ ಮಾತನಾಡಿ ನಿರ್ದಿಷ್ಟವಾದ ಉತ್ತರವನ್ನು ನಾನು ನಾಳೆ ಅಥವಾ ನಾಡಿದ್ದು ತಿಳಿಸುತ್ತೇನೆ.

ಎ) ದ. ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಕಡಿತದಿಂದ ಸಾರ್ವಜನಿಕರಿಗೆ ತೊಂದರೆ

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಕಳೆದ 10 ದಿವಸಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಣಿಪಾಲ ಮತ್ತು ಉಡುಪಿ ಈ ಎಲ್ಲಾ ಕಡೆಗಳಲ್ಲಿ ವಿದ್ಯುಚ್ಛಕ್ತಿ ಮಂಡಳಿಯವರು ಅನಧಿಕೃತವಾಗಿ 8-10 ಗಂಟೆಗಳ ಕಾಲ ಲೋಡ್ ಷೆಡ್ಡಿಂಗ್ ಮಾಡುತ್ತಿದ್ದಾರೆ. ಇದರಿಂದಾಗಿ ಸಣ್ಣ ಕೈಗಾರಿಕೆಗಳು, ಪತ್ರಿಕೆಗಳು, ಮತ್ತು ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಮಂಗಳೂರು ನಗರಪಾಲಿಕೆಗೆ ತುಂಬೆ ವೆಂಟೆಡ್ ಡ್ಯಾಮ್‌ನಿಂದ ಪೂರ್ಣ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿಲ್ಲ. ಕುಡಿಯುವ ನೀರಿಗೆ ತೀವ್ರ ತೊಂದರೆ ಇದೆ. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ವಿದ್ಯುತ್ ಮಂಡಲಿಯವರಿಗೆ ಒಂದು ನಿಯಮಾವಳಿ ಇಲ್ಲವೆ. ನಾವು ಕೇಳಿದರೆ ಬೆಂಗಳೂರಿನಿಂದ ಆದೇಶ ಬಂದಿದೆ. ಟ್ರಿಪ್ ಆಗುತ್ತಾ ಉಂಟು, ನಾವು ಬೇರೆ ಬೇರೆ ಕಾರಣಗಳಿಗೋಸ್ಕರ ಅನಧಿಕೃತವಾಗಿ ನಾವು ಲೋಡ್ ಷೆಡ್ಡಿಂಗ್ ಮಾಡುತ್ತೇವೆಂದು ಹೇಳುತ್ತಾರೆ. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ ನೀವು ನಿಯಮತವಾಗಿ ಒಂದು ದಿವಸದಲ್ಲಿ ಇಂತಿಷ್ಟು ಗಂಟೆಗಳ ಕಾಲ ಲೋಡ್ ಷೆಡ್ಡಿಂಗ್ ಮಾಡುತ್ತೇವೆಂದು ಹೇಳಿಲ್ಲವೇ ಅಥವಾ ಯಾವ ಕ್ರಮದಲ್ಲಿ ಲೋಡ್ ಷೆಡ್ಡಿಂಗ್ ಮಾಡಿಕೊಳ್ಳುತ್ತಿದ್ದೀರಿ. ಅಥವಾ ಎಲ್ಲಾ ಜಿಲ್ಲೆಗಳಿಗೂ ಈ ತರಹ ಮಾಡುತ್ತಿದ್ದೀರಾ? ಇದಕ್ಕೆ ಏನು ಕಾರಣ? ಜನರನ್ನು ಕತ್ತಲೆಯಲ್ಲಿಟ್ಟುಕೊಳ್ಳತಕ್ಕಂಥಾದ್ದು ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಆಗುತ್ತಾ ಉಂಟು, ಓದುವುದಕ್ಕೆ ಆಗುವುದಿಲ್ಲ. ನೀವು ಸೀಮೆಎಣ್ಣೆ ಸಪ್ಲೈ ಮಾಡುತ್ತಿಲ್ಲ. ಸೂಟೆ ಹಿಡಿದುಕೊಂಡು ಓದಿಸೋಣ ಅಂದರೆ ಸೌದೆ ಸಹ ಸಿಗುತ್ತಿಲ್ಲ. ತೆಂಗಿನ ಮರಗಳಿಗೆ ರೋಗ ಬರುತ್ತಾ ಉಂಟು. ಯಾವುದೇ ತೊಂದರೆ ಇಲ್ಲದೆ ನಿಯಮಿತವಾಗಿ ನೀವು ಎಷ್ಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುತ್ತೀರಿ ಎನ್ನುವ ಬಗ್ಗೆ ಸರ್ಕಾರ ನೇರವಾದ ಉತ್ತರವನ್ನು ಕೊಡಬೇಕು. ವಿದ್ಯುತ್ ತೊಂದರೆಯಿಂದ ಮಂಗಳೂರು ನಗರಕ್ಕೆ ನೀರು ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕಿರು ನೀರು ಸರಬರಾಜು ಯೋಜನೆಗಳು ಕೆಲಸ ಮಾಡುತ್ತಿಲ್ಲ. ಯಾವುದೇ ರೀತಿಯಿಂದ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಜಿಲ್ಲೆಯ ಲೋಡ್ ಷೆಡ್ಡಿಂಗ್ ಬಗ್ಗೆ ತಾವು ಒಂದು ಟೆಂಟೀಟೀವ್ ಕೊಡಿ, ಒಂದು ಗಂಟೆ ಲೋಡ್ ಷೆಡ್ಡಿಂಗ್ ಮಾಡುತ್ತೇವೆ ಯಾವ ಗಂಟೆಯಿಂದ ಯಾವ ಗಂಟೆಯವರೆಗೆ ಎಂದು. ಆದರೆ ನಮ್ಮ ತುಂಬಾ ವೆಂಟೆಡ್ ಡ್ಯಾಮ್ ನಿಂದ ನೀರು ಸರಬರಾಜು ಮಾಡುವುದಕ್ಕೆ ವಿದ್ಯುತ್ ಪೂರ್ಣ ಪ್ರಮಾಣದಲ್ಲಿ 24ಗಂಟೆಗಳ ಕಾಲ ಕೊಡಬೇಕು. ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದ ಹಾಗೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಯಾಗದ ಹಾಗೆ ತಾವು ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿಯ ಅಭಾವ ತಮಗೆಲ್ಲಾ ಗೊತ್ತಿದ್ದಂತೆ ಬೇಡಿಕೆ 71ಮಿಲಿಯನ್ ಯೂನಿಟ್‌ಗಳಿಗಿಂತ ಹೆಚ್ಚು ಇದೆ. ಆದರೆ ವಿದ್ಯುತ್ ಉತ್ಪಾದನೆ ಕೇವಲ 51ಮಿಲಿಯನ್ ಯೂನಿಟ್‌ಗಳಷ್ಟು ಮಾತ್ರ ಇದೆ. ಆ ಕಾರಣದಿಂದ ಉತ್ಪಾದನೆಯಾಗಿರುವ ವಿದ್ಯುಚ್ಛಕ್ತಿಯನ್ನು ಸಕ್ರಮವಾಗಿ ಹಂಚಬೇಕಾಗಿರತಕ್ಕಂಥ ಸಂದರ್ಭದಲ್ಲಿ ವಿತರಣಾ ಜಾಲದಲ್ಲಿಯೂ ಕೂಡ ನಮಗೆ ದೊಡ್ಡ ಕೊರತೆ ಇದೆ. ಆದ್ದರಿಂದ ಆಗಾಗ್ಗೆ ಅನಿರ್ದಿಷ್ಟವಾಗಿರತಕ್ಕಂಥ ಸಮಯದಲ್ಲಿ ಕೂಡ ವಿದ್ಯುತ್ ನಿಲುಗಡೆಯನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ತಿಳಿಸಿದಂತೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮತ್ತು ಕುಡಿಯುವ ನೀರಿಗಾಗಿ ಆಧ್ಯತೆಯನ್ನು ಕೊಡಬೇಕೆಂದು ಹೇಳಿದ್ದೇವೆ. 6ಗಂಟೆಯಿಂದ 10ಗಂಟೆಯೊಳಗೆ ಇರತಕ್ಕಂಥಾದ್ದಕ್ಕೆ ಒಂದು ಗಂಟೆ ವಿದ್ಯುತ್ ನಿಲುಗಡೆ ಮಾಡಬೇಕೆಂದು ಇರುವುದರಿಂದ ಆಯಾಯಾ ಸಂರ್ಭಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳ ಓದಿಗಾಗಿ ಅನಾನುಕೂಲವಾಗಬಾರದೆಂದು ನಾವು ತಿಳಿಸಿದ್ದೇವೆ. ತಾವು ಪ್ರಸ್ತಾಪ ಮಾಡಿದಂತಹ ಪ್ರದೇಶಗಳಲ್ಲಿ ಈ ರೀತಿಯ ತೊಂದರೆಗಳು ಏನಾದರೂ ಇದ್ದರೆ ಈ ದಿವಸವೇ ನಾನು ಮುಖ್ಯ ಇಂಜನೀಯರ್ ಜೊತೆ ಮಾತನಾಡಿ ಅದನ್ನು ಸರಿಪಡಿಸುತ್ತೇನೆ.

ಏ) ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕೇಂದ್ರ ಸರ್ಕಾರದ ಸರ್ವೆ ಆಫ್ ಇಂಡಿಯಾದ ತಂಡ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಸರ್ವೆ ಕಾರ್ಯಕ್ರಮಗಳಿಗೆ ಅಡ್ಡಿಯಾಗಿರುವುದು.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಸರ್ಕಾರದ ಗಮನ ಸಳೆಯುತ್ತಾ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕೇಂದ್ರ ಸರ್ಕಾರದ ಸರ್ವೆ ಆಫ್ ಇಂಡಿಯಾದ ತಂಡ ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು, ತತ್‌ಕೊಳ ರಿಜರ್ವ್ ಫಾರೆಸ್ಟ್, ಇಲ್ಲಿ 24-3-99ರಂದು ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸರ್ವೆ ಕಾರ್ಯವನ್ನು ಈ ಒತ್ತುವರಿಯನ್ನು ತಡೆಯುವುದಕೋಸ್ಕರ ಸರ್ವೆ ಕಾರ್ಯವನ್ನು ಪ್ರಾರಂಭಿಸಿದರು. ಇದ್ದಕಿದ್ದ ಹಾಗೆ ಮಾರನೆ ದಿವಸ 25-3-99ರಂದು ಮಧ್ಯಾಹ್ನ ಈ ಸರ್ವೆ ಕಾರ್ಯವನ್ನು ಕೈ ಬಿಡಬೇಕಾದಂತಹ ಪ್ರಸಂಗ ಬಂತು. ಕಾರಣ ಅರಣ್ಯ ಒತ್ತುವರಿ ಮಾಡಿಕೊಂಡು ಯಾರು ಇದ್ದಾರೆ ಆ ಜನರ ಒಂದು ದೊಡ್ಡ ತಂಡ ಬಂದು ನುಗ್ಗಿ ಇವರ ಮೇಲೆ ಹಲ್ಲೆ ಮಾಡಿ ಇವರು ಸರ್ವೆ ಮಾಡಲಿಕ್ಕೆ ಏನು ಕಲ್ಲುಗಳನ್ನು ಹೂತಿದ್ದರು ಆ ಕಲ್ಲುಗಳನ್ನು ಕಿತ್ತು ಹಾಕಿ ನೀವು ಇಲ್ಲಿ ಸರ್ವೆ ಮಾಡಿದರೆ ಹುಷಾರ್ ಎಂದು ಹೇಳಿ ಕಳುಹಿಸಿದ್ದಾರೆ. ಈ ಸಂದರ್ಭದಲ್ಲಿ ಅವರು ಒಂದು ಟೆಲಿಗ್ರಾಂ ಅನ್ನು ಕಳುಹಿಸಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ:

"The survey work in Tatkil Reserve Forest was started on 24-3-99 and continued on 25-3-99 as usual till atfernoon without disturbance. Afterwards, the encroachers came to the spot, agitated and disturbed the work. The pillars were removed and thrown with interference from I.B. Shankar, Ex-MLA and President of Raitara and coffee Belegarara Hitarakshaka Samithi, Chikamagalore Dt. Hence the circumstances forced to suspend the work temporarily.ಎಂದು ಟೆಲಿಗ್ರಾಂ ಕೂಡ ಕೊಟ್ಟಿದ್ದಾರೆ. ಇದಾದ ನಂತರ